# ಏರಿಯೇಟರ್ ಅಳವಡಿಕೆಗೆ ಮೇ 7ರವರೆಗೆ ಗಡುವು

**ಬೆಂಗಳೂರು:** ಬೆಂಗಳೂರಿನ ಸಾರ್ವಜನಿಕ ಸ್ಥಳಗಳಲ್ಲಿ ಏರಿಯೇಟರ್, ಫ್ಲೋ ರಿಸ್ಟ್ರಿಕ್ಟರ್ ಅವಳಡಿಕೆ ಅಂತಿಮ ದಿನವನ್ನು ಮೇ 7ರವರೆಗೆ ವಿಸ್ತರಣೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ನೀರು ಉಳಿತಾಯ ಹಾಗೂ ನೀರಿನ ಸದ್ಬಳಕೆಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಮಾಲ್‌ಗಳಲ್ಲಿ, ವಾಣಿಜ್ಯ ಸಂಕೀರ್ಣ ಗಳಲ್ಲಿ, ಅಪಾರ್ಟ್‌ಮೆಂಟ್ ಗಳಲ್ಲಿ, ಸರಕಾರಿ ಕಟ್ಟಡಗಳಲ್ಲಿ, ಐಷಾರಾಮಿ ಹೋಟೆಲ್‌ಗಳಲ್ಲಿ, ರೆಸ್ಟೋ ರೆಂಟ್ ಗಳಲ್ಲಿ ಹಾಗೂ ಧಾರ್ಮಿಕ ಸ್ಥಳಗಳನ್ನೊಳಗೊಂಡ ಸಾರ್ವಜನಿಕ ಪ್ರದೇಶಗಳಲ್ಲಿ ಸ್ವಚ್ಛತೆಗಾಗಿ ಬಳಸುವ ನಲ್ಲಿಗಳಲ್ಲಿ ಕಡ್ಡಾಯವಾಗಿ ಏರಿಯೇಟರ್, ಫ್ಲೋ ರಿಸ್ಟ್ರಿಕ್ಟರ್ ಅಳವಡಿಸಿ ಕೊಳ್ಳಲು ನೀಡಲಾಗಿದ್ದ ಗಡುವನ್ನು ಮೇ 7ರವರೆಗೆ ವಿಸ್ತರಿಸಲಾಗಿದೆ. ಈಗಾಗಲೇ ನಗರದಾದ್ಯಂತ ಅನೇಕ ಭಾಗದಲ್ಲಿ ಸುಮಾರು ಆರು ಲಕ್ಷಕ್ಕೂ ಹೆಚ್ಚು ಏರಿಯೇಟರ್‌ಗಳನ್ನು ಅಳವಡಿಸಿಕೊಳ್ಳಲಾಗಿದೆ. ಮೇ 7ರೊಳಗಾಗಿ ಏರಿಯೇಟರ್, ಫ್ಲೋ ರಿಸ್ಟ್ರಿಕ್ಟರ್ ಅಳವಡಿಸಿಕೊಳ್ಳದೇ ಇರುವಂತಹ ಮಾಲ್‌ಗಳಲ್ಲಿ, ವಾಣಿಜ್ಯ ಸಂಕೀರ್ಣಗಳಲ್ಲಿ, ಅಪಾರ್ಟ್‌ಮೆಂಟ್‌ಗಳಲ್ಲಿ, ಸರಕಾರಿ ಕಟ್ಟಡಗಳಲ್ಲಿ, ಐಷಾರಾಮಿ ಹೋಟೆಲ್‌ಗಳಲ್ಲಿ, ರೆಸ್ಟೋರೆಂಟ್‌ಗಳಲ್ಲಿ ಹಾಗೂ ಧಾರ್ಮಿಕ ಸ್ಥಳಗಳನ್ನೊಳಗೊಂಡ ಸಾರ್ವಜನಿಕ ಪ್ರದೇಶಗಳಲ್ಲಿ ಇದನ್ನ ಅಳವಡಿಸಿಕೊಳ್ಳಬೇಕು. ಮೇ 8 ರ ನಂತರ ಜಲಮಂಡಳಿ ಅಧಿಕಾರಿಗಳು ಪರಿಶೀಲನೆ ನಡೆಸಿ ಎರಿಯೇಟರ್ ಅಳವಡಿಸಿಕೊಳ್ಳದೇ ಇರುವಂತವರ ಮೇಲೆ ದಂಡ ವಿಧಿಸಲಾಗುವುದು ಎಂದು ಸೂಚನೆ ನೀಡಿದರು.

# ಇಸ್ಕಾನ್: ಭವ್ಯ ಬ್ರಹ್ಮ ರಥೋತ್ಸವ, ರಜತ ಮಹೋತ್ಸವ

**ಬೆಂಗಳೂರು:** ಇಸ್ಕಾನ್ ವಾರ್ಷಿಕ ಬ್ರಹ್ಮೋತ್ಸವ ಹಾಗೂ ಹರೇ ಕೃಷ್ಣ ಗಿರಿಯ ಮೇಲೆ ವಿಗ್ರಹಗಳ ಪ್ರತಿಷ್ಠಾಪನೆಯ ದಿನದ ಅಂಗವಾಗಿ ಬುಧವಾರ ಬ್ರಹ್ಮ ರಥೋತ್ಸವವನ್ನು ಆಚರಿಸಿದ್ದು, ರಾಧಾ ಕೃಷ್ಣಚಂದ್ರ, ಕೃಷ್ಣ ಬಲರಾಮ ಮತ್ತು ನಿತಾಯ್ ಗೌರಂಗ ವಿಗ್ರಹಗಳನ್ನು ಬ್ರಹ್ಮ ರಥದಲ್ಲಿ ದೇವಾಲಯದ ಸುತ್ತಲೂ ಮೆರವಣಿಗೆ ಮಾಡಲಾಯಿತು.

13 ದಿನಗಳ ಕಾರ್ಯಕ್ರಮದಲ್ಲಿ ದೇಶಾದ್ಯಂತ ಆಧ್ಯಾತ್ಮಿಕ ನಾಯಕರು, ಲಕ್ಷಾಂತರ ಭಕ್ತರು ಭಾಗವಹಿಸಿ ದ್ದಾರೆ. ಏ.21 ರಂದು ಧ್ವಜ ಆರೋಹಣ ಅಥವಾ ಗರುಡ ಪಟ ಆರೋಹಣದೊಂದಿಗೆ ರಥೋತ್ಸವ ಪ್ರಾರಂಭ ವಾಗಿತ್ತು. ಪ್ರತಿದಿನ ಸಂಜೆ ರಾಧಾ ಕೃಷ್ಣಚಂದ್ರರ ಉತ್ಸವ ಮೂರ್ತಿಗಳನ್ನು ವಿಶೇಷ ಅಲಂಕಾರದಲ್ಲಿ ಅಲಂಕರಿಸಿ ವಿವಿಧ ವಾಹನಗಳಲ್ಲಿ ದೇವಾಲಯದ ಸುತ್ತಲೂ ಕರೆದೊಯ್ಯಲಾಗುತ್ತಿತ್ತು. ಭಗವಂತನ ಪ್ರಸನ್ನತೆಗಾಗಿ ಪ್ರಸಿದ್ಧ ಕಲಾವಿದರಿಂದ ನೃತ್ಯ ಸೇವೆ ಮತ್ತು ಸಂಗೀತ ಸೇವೆಯಂತಹ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಇದರ ನಂತರ, ವಿಗ್ರಹಗಳಿಗೆ ಡೋಲೋತ್ಸವ ಸೇವೆಯನ್ನು ನಡೆಸಲಾಗಿತ್ತು, ಈ ಸಮಯದಲ್ಲಿ ದೇವರನ್ನು ಭಜನೆಗಳೊಂದಿಗೆ ಉಯ್ಯಾಲೆಯಲ್ಲಿ ತೂಗಲಾಯಿತು.

> ಇಸ್ಕಾನ್ ಬೆಂಗಳೂರಿನ ವಾರ್ಷಿಕ ಬ್ರಹ್ಮೋತ್ಸವ ಮತ್ತು ರಜತ ಮಹೋತ್ಸವ ಆಚರಣೆಯಲ್ಲಿ ಲಕ್ಷಾಂತರ ಭಕ್ತರು ಭಾಗವಹಿಸುವುದನ್ನು ನೋಡಿ ಸಂತೋಷವಾಗಿದೆ. ಶ್ರೀ ರಾಧಾ ಕೃಷ್ಣಚಂದ್ರ ಎಲ್ಲರಿಗೂ ತಮ್ಮ ಕರುಣೆಯನ್ನು ನೀಡಲು ಹರೇ ಕೃಷ್ಣ ಗಿರಿಯ ಮೇಲೆ ನೆಲೆಸಿದರು. ದೇವರ ಪ್ರತಿಷ್ಠಾಪನೆಯ ಶುಭ ವಾರ್ಷಿಕೋತ್ಸವದ ಅಂಗವಾಗಿ ನಾವು ಇಂದು ಬ್ರಹ್ಮ ರಥೋತ್ಸವವನ್ನು ನಡೆಸಿದ್ದೇವೆ.
>
> -ಮಧು ಪಂಡಿತ್ ದಾಸರು, ಇಸ್ಕಾನ್ ಬೆಂಗಳೂರು ಅಧ್ಯಕ್ಷ

ಮೇ 2 ರಂದು ಮೂಲ ವಿಗ್ರಹಗಳಿಗೆ ಮಹಾ ಕುಂಭಾಭಿಷೇಕವನ್ನು ಅರ್ಪಿಸಲಾಗುತ್ತದೆ. ಇದು 12 ವರ್ಷಗಳಿಗೊಮ್ಮೆ ನಡೆಸಲಾಗುವ ವಿಸ್ತಾರವಾದ ಅಭಿಷೇಕವಾಗಿದೆ. ದೇವರಿಗೆ ಕಲ್ಯಾಣಿಯಲ್ಲಿ ಅದ್ದೂರಿ ಯಾಗಿ ತೆಪ್ಪೋತ್ಸವವನ್ನು ನಡೆಸಲಾಗುತ್ತದೆ. ಉತ್ಸವವು ಮೇ3 ರಂದು ಧ್ವಜ ಅವರೋಹಣ ಸಮಾರಂಭದೊಂದಿಗೆ ಕೊನೆಗೊಳ್ಳಲಿದೆ.



ರಾಧಾ ಕೃಷ್ಣಚಂದ್ರ, ಕೃಷ್ಣ ಬಲರಾಮ ಮತ್ತು ನಿತಾಯ್ ಗೌರಂಗ ವಿಗ್ರಹಗಳನ್ನು ಬ್ರಹ್ಮ ರಥದಲ್ಲಿ ದೇವಾಲಯದ ಸುತ್ತಲೂ ಮೆರವಣಿಗೆ ಮಾಡಲಾಯಿತು.

## ಸಮಾಚಾರ ಸಣ್ಣದಲ್ಲ

### ಎಫ್‌ಕೆಸಿಸಿಐಗೆ ಒಡೆಯರ್ ಪ್ರಶಸ್ತಿ

**ಬೆಂಗಳೂರು:** ಕಸಾಪದಿಂದ ನೀಡಲಾಗುತ್ತಿರುವ 2024ನೇ ಸಾಲಿನ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ದತ್ತಿ ಪ್ರಶಸ್ತಿಗೆ ಎಫ್‌ಕೆಸಿಸಿಐ ಆಯ್ಕೆಯಾಗಿದೆ. ಪರಿಷತ್ತು ಸ್ಥಾಪಕ ಶ್ರೀಕೃಷ್ಣರಾಜ ಒಡೆಯರ್ ಹೆಸರಿನಲ್ಲಿ ಸ್ಥಾಪಿಸಿದ ಈ ಪ್ರಶಸ್ತಿಯನ್ನು ಕೈಗಾರಿಕೆ, ಶಿಕ್ಷಣ, ಕೃಷಿ, ನೀರಾವರಿ, ವಿದ್ಯುಚ್ಛಕ್ತಿ, ಹಿಂದುಳಿದ ವರ್ಗದ ಕಲ್ಯಾಣ, ಸಾಮಾಜಿಕ ನ್ಯಾಯ, ಮಹಿಳಾ ಸಬಲೀಕರಣ, ವೈದ್ಯಕೀಯ ಮೊದಲಾದ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಹಾಗೂ ಗಣನೀಯ ಕೊಡುಗೆ ನೀಡಿರುವ ಗಣ್ಯರಿಗೆ ಅಥವಾ ಸಂಸ್ಥೆಗೆ ನೀಡಬೇಕು ಎನ್ನುವುದು ದತ್ತಿಯ ಆಶಯ. ಅದರಂತೆ ಪ್ರಶಸ್ತಿ ನೀಡಲಾಗುತ್ತಿದೆ ಎಂದು ಕನ್ನಡ ಸಾಹಿತ್ಯ ಪರಿಷತ್ತು ಅಧ್ಯಕ್ಷ ನಾಡೋಜ ಡಾ. ಮಹೇಶ ಜೋಶಿ ತಿಳಿಸಿದರು.

### ಪ್ರಿಯತಮೆ ಜತೆ ಗೆಳೆತನ

**ಬೆಂಗಳೂರು:** ತನ್ನ ಪ್ರಿಯತಮೆ ಜತೆ ಗೆಳೆತನ ಬೆಳೆಸಿದ್ದಕ್ಕೆ ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪದಲ್ಲಿ ಇಬ್ಬರು ಆರೋಪಿಗಳನ್ನು ಶಂಕರಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಹಲ್ಲೆಗೊಳಗಾದ ಹರ್ಷಿತ್ ಎಂಬುವರು ನೀಡಿದ ದೂರು ಆಧರಿಸಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ಶಶಾಂತ್ ಹಾಗೂ ಚಂದನ್ ಎಂಬುವರನ್ನು ಬಂಧಿಸಿದ್ದಾರೆ. ಬಸವನಗುಡಿ ಬುಲ್ ಟೆಂಬಲ್ ರಸ್ತೆಯಲ್ಲಿರುವ ಪುಲ್ವಾಡಿ ಹೂವಿನಂಗಡಿ ಬಳಿ ಕಳೆದ ಏ.28ರಂದು ಈ ಕೃತ್ಯ ನಡೆದಿತ್ತು. ಬಿಕಾಂ ಪದವೀಧರ ಹರ್ಷಿತ್ ಎಂಬಾತ ಕೆಲಸಕ್ಕೆ ಹೋಗದೇ ಶಂಕರಪುರ ಬಳಿ ತಂದೆ ನಡೆಸುತ್ತಿದ್ದ ಹೂವಿನ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ಅದೇ ಕಟ್ಟಡದಲ್ಲಿನ ಡಯೋಗ್ನಾಸ್ಟಿಕ್ ಸೆಂಟರ್‌ವೊಂದರಲ್ಲಿ ಯುವತಿ ಕೆಲಸ ಮಾಡುತ್ತಿದ್ದಳು. ಈ ಮಧ್ಯೆ ಚಿಲ್ಲರೆ ಹಣ ಕೇಳಲು ಹೋಗಿದ್ದಾಗ ಯುವತಿ ಮತ್ತು ಹರ್ಷಿತ್ ಮಧ್ಯೆ ಗೆಳೆತನ ಬೆಳೆದಿದೆ. ಅದೇ ಗೆಳೆತನ ಮೊಬೈಲ್ ನಂಬರ್ ವಿನಿಮಯಕ್ಕೆ ದಾರಿಯಾಗಿತ್ತು. ಕಾಲ ಕ್ರಮೇಣ ಪರಸ್ಪರರು ಸಂದೇಶಗಳನ್ನು ರವಾನಿಸಿಕೊಳ್ಳುತ್ತಿದ್ದರು. ಇನ್ನು ಅವರಿಬ್ಬರ ಗೆಳೆತನ ವಿಷಯ ಯುವತಿಯನ್ನು ಪ್ರೀತಿ ಮಾಡುತ್ತಿದ್ದ ಪ್ರಿಯತಮ ಶಶಾಂಕ್ ಗಮನಕ್ಕೆ ಬಂದಿದೆ. ಇಬ್ಬರ ನಡುವಿನ ಸಂಬಂಧದ ಬಗ್ಗೆ ಅನುಮಾನ ಮೂಡಿಸಿಕೊಂಡಿದ್ದ ಆರೋಪಿಯೂ, ಯುವತಿ ಮೊಬೈಲ್ ಪರಿಶೀಲನೆ ವೇಳೆ ಚಾಟ್ ಮಾಡಿರುವುದನ್ನು ನೋಡಿದ್ದಾನೆ. ಮೊಬೈಲ್ ಚಾಟ್‌ನಲ್ಲಿ ಕೇವಲ ಸ್ನೇಹಿತರ ರೀತಿ ಸಂದೇಶಗಳಿದ್ದವು. ಅದನ್ನು ಸಹಿಸಿಕೊಳ್ಳಲು ಶಶಾಂಕ್ ಸಿದ್ಧವಿರಲಿಲ್ಲ. ಹರ್ಷಿತ್‌ಗೆ ಒಂದು ಗತಿ ಕಾಣಿಸಬೇಕೆಂದು ಶಶಾಂಕ್ ನಿರ್ಧರಿಸಿದ್ದ.

**ಗಾಯಗೊಂಡ ಹರ್ಷಿತ್‌ಗೆ ಚಿಕಿತ್ಸೆ :** ಕಳೆದ ಏಪ್ರಿಲ್ 28ರಂದು ಸ್ನೇಹಿತ ಚಂದನ್‌ನನ್ನು ತಾನಿರುವ ಸ್ಥಳಕ್ಕೆ ಕರೆಸಿಕೊಂಡು ಮದ್ಯ ಸೇವಿಸಿದ್ದಾರೆ. ಬಳಿಕ ಲಾಂಗ್ ಜತೆಗೆ ಬೈಕ್‌ನಲ್ಲಿ ಹರ್ಷಿತ್ ಅಂಗಡಿಗೆ ತೆರಳಿ ಏಕಾಏಕಿ ಆತನ ಮೇಲೆ ಹಲ್ಲೆ ಮಾಡಿದ್ದಾರೆ. ಘಟನೆಯಲ್ಲಿ ಹರ್ಷಿತ್‌ಗೆ ಎಡಗೈ, ಮುಂಗೈ ಹಾಗೂ ತೋಳಿನ ಭಾಗಗಳಲ್ಲಿ ಗಂಭೀರವಾಗಿ ಗಾಯಗಳಾಗಿದ್ದು, ಸ್ಥಳೀಯರು ಕೂಡಲೇ ಆಸ್ಪತ್ರೆಗೆ ಕರೆದೊಯ್ದಿದ್ದರು. ಸ್ಥಳೀಯ ಆಸ್ಪತ್ರೆಯಲ್ಲಿ ಹರ್ಷಿತ್ ಚಿಕಿತ್ಸೆ ಪಡೆಯುತ್ತಿದ್ದು, ಗಾಯಗಳಿಂದ ಚೇತರಿಸಿಕೊಳ್ಳುತ್ತಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿರಾಮ
ಪ್ರತಿ ಭಾನುವಾರ

ನಿತ್ಯ 39 ಡಿಗ್ರಿ ಆಸುಪಾಸಿನಲ್ಲಿ ರಾಜಧಾನಿಯ ತಾಪಮಾನ | ನಾಲ್ಕು ದಶಕದ ಬಳಿಕ ಏಪ್ರಿಲ್‌ನಲ್ಲಿ ಶೂನ್ಯ ಮಳೆ ದಾಖಲು

# ಬೆಂಗಳೂರಿಗೆ ಬಿಸಿಗಾಳಿಯ ಆತಂಕ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಬಿಸಿಲಿನ ತಾಪದ ನಡುವೆಯೇ ಬಿಸಿಗಾಳಿಯ ತೀವ್ರತೆಯೂ ಹೆಚ್ಚಾಗುತ್ತಿದ್ದು, ಮುಂದಿನ ಐದು ದಿನಗಳ ಕಾಲ 18 ಜಿಲ್ಲೆಗಳಿಗೆ ಹೀಟ್ ವೇವ್ ಅಲರ್ಟ್ ಹಾಗೂ 6 ಜಿಲ್ಲೆಗಳಿಗೆ ರೆಡ್ ಅಲರ್ಟ್‌ನ್ನು ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಪ್ರತೀ ವರ್ಷ ಏಪ್ರಿಲ್ ತಿಂಗಳಿನಲ್ಲಿ ಮಳೆಯಾಗಿದ್ದು, ಈ ಬಾರಿ ಏಪ್ರಿಲ್‌ನಲ್ಲಿ ಮಳೆಯಾಗಿಲ್ಲ. ವಿಶೇಷವಾಗಿ ಬೆಂಗಳೂರಿನಲ್ಲಿ ಪ್ರತಿವರ್ಷ ಏಪ್ರಿಲ್ ತಿಂಗಳಲ್ಲಿ ಮಳೆಯಾದಂತೆ ಈ ಬಾರಿಯಾಗಿಲ್ಲ. ಆದ್ದರಿಂದ ಕಳೆದ 41 ವರ್ಷಗಳಲ್ಲಿ ಏಪ್ರಿಲ್ ಅತ್ಯಂತ ಒಣ ತಿಂಗಳಾಗಿದೆ. ನಗರದಲ್ಲಿ ಈವರೆಗೆ ಏಪ್ರಿಲ್ ತಿಂಗಳಿನಲ್ಲಿ 180 ಮಿಮೀ ಸರಾಸರಿ ಮಳೆ ದಾಖಲಾಗಿದೆ. ಆದರೆ ಈ ಬಾರಿ ಏಪ್ರಿಲ್ ತಿಂಗಳಲ್ಲಿ ಬೆಂಗಳೂರಲ್ಲಿ ಮಳೆಯಾಗಿಲ್ಲ.

ಇನ್ನು ಮುಂದಿನ ಐದು ದಿನಗಳ ಕಾಲ ಬೆಂಗಳೂರು ಸೇರಿದಂತೆ ಬೆಳಗಾವಿ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ, ಕೊಪ್ಪಳ ಜಿಲ್ಲೆಗಳಿಗೆ ರೆಡ್ ಅಲರ್ಟ್ ನೀಡಲಾಗಿದ್ದು, ಕಲಬುರಗಿ, ಚಿತ್ರದುರ್ಗ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ, ಮೈಸೂರು, ತುಮಕೂರು ಮತ್ತು ಯಾದಗಿರಿ ಜಿಲ್ಲೆಗಳಿಗೆ ಆರೆಂಜ್ ಅಲರ್ಟ್ ನೀಡಲಾಗಿದೆ. ಈ ಪ್ರದೇಶಗಳಿಗೆ ತೀವ್ರ ಬಿಸಿಗಾಳಿ ಪರಿಸ್ಥಿತಿ ಹೆಚ್ಚಾಗುವ ಸಾಧ್ಯತೆಯಿದೆ.

**ಏಪ್ರಿಲ್‌ನಲ್ಲಿ ಶೂನ್ಯ ಮಳೆ:** ಐಎಂಡಿ ವರದಿ ಪ್ರಕಾರ, ಏಪ್ರಿಲ್ 30ರಂದು ಬೆಂಗಳೂರಿನಲ್ಲಿ 38.2 ಡಿ.ಸೆ. ತಾಪಮಾನವನ್ನು ದಾಖಲಿಸಿದೆ. ಈ ಏಪ್ರಿಲ್‌ನಲ್ಲಿ ಮೂರು ಬಾರಿ ತಾಪಮಾನವು 38ಡಿ.ಸೆ. ತಲುಪಿದೆ. ಕಳೆದ ನಾಲ್ಕು ದಿನಗಳಲ್ಲಿ ಬೆಂಗಳೂರು 38.0 ಡಿ.ಸೆ., 38.5 ಡಿ.ಸೆ. ತಾಪಮಾನವನ್ನು ಅನುಭವಿಸಿದೆ, ಒಂದು ತಿಂಗಳು ಪೂರ್ತಿ 37.8 ಡಿ.ಸೆ. ರಿಂದ 38.2 ಡಿ.ಸೆ. ತಾಪಮಾನವನ್ನು ಬೆಂಗಳೂರು ಅನುಭವಿಸಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಭಾಗದಲ್ಲಿ ಮುಂದಿನ ಐದು ದಿನಗಳ ಕಾಲ ನಿರೀಕ್ಷಿತ ತಾಪಮಾನದಲ್ಲಿ ಯಾವುದೇ ದೊಡ್ಡ ಬದಲಾವಣೆ ಇಲ್ಲ. ಮುಂದಿನ 48 ಗಂಟೆಗಳಲ್ಲಿ ಸ್ಪಷ್ಟವಾದ ಆಕಾಶವಿರಲಿದ್ದು ಮೋಡ ಕವಿದ ವಾತಾವರಣ ಇರುವುದಿಲ್ಲ. ಗರಿಷ್ಠ ಮತ್ತು ಕನಿಷ್ಠ ತಾಪಮಾನ ಬೆಂಗಳೂರಿನಲ್ಲಿ ಕ್ರಮವಾಗಿ 38 ಡಿ.ಸೆ. ಮತ್ತು 24 ಡಿ.ಸೆ. ಆಗಿರುತ್ತದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

**ಎಲ್ಲೆಲ್ಲಿ ಎಷ್ಟು?:** ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ ದಾಖಲಾಗಿದೆ. ಬೆಂಗಳೂರಿನಲ್ಲಿ ಈ ವರ್ಷದ ಗರಿಷ್ಠ 41.8 ಡಿಗ್ರಿ ಸೆಲ್ಸಿಯಸ್ ತಾಪಮಾನ ಮಂಗಳವಾರ ದಾಖಲಾಗಿದೆ. ಇದು ಬೆಂಗಳೂರು ಇತಿಹಾಸದಲ್ಲಿ ದಾಖಲಾಗಿರುವ 3ನೇ ಗರಿಷ್ಠ ತಾಪಮಾನವಾಗಿದೆ.



- ಕೆಂಗೇರಿಯಲ್ಲಿ 41.8 ಡಿ.ಸೆ.
- ಬೆಂಗಳೂರಿನ ಬಿದರಹಳ್ಳಿ 41.3 ಡಿ.ಸೆ.
- ಬೆಂಗಳೂರು ಸಿಟಿ ವೀಕ್ಷಣಾಲಯ 38.2 ಡಿ.ಸೆ.
- ಎಚ್‌ಎಎಲ್ ವಿಮಾನ ನಿಲ್ದಾಣ 37.5 ಡಿ.ಸೆ.
- ಬೆಂಗಳೂರು ವಿವಿ 40 ಡಿ.ಸೆ.
- ಹೆಸರಘಟ್ಟ 40.1 ಡಿ.ಸೆ.
- ಲಾಲ್ ಬಾಗ್ 40.5ಡಿ.ಸೆ.
- ಯಲಹಂಕ 40.8 ಡಿ.ಸೆ
- ತಾವರೆಕೆರೆ 40.3 ಡಿ.ಸೆ
- ಉತ್ತರಹಳ್ಳಿ 40.3 ಡಿ.ಸೆ

### ವರ್ಷವಾರು ತಾಪಮಾನದ ಅಂಕಿ ಅಂಶ

- 1931 ಏ.30– 38.3 ಡಿ.ಸೆ
- 2016 ಏ.24– 39.2 ಡಿ.ಸೆ.
- 2024 ಏ.28–38.5 ಡಿ.ಸೆ
- 2024 ಏ.30 –38.2 ಡಿ.ಸೆ
- 2016 ಏ.23 ಮತ್ತು 2024 ಏ.27 ರಂದು 38.0 ಡಿ.ಸೆ.

## ಬಿಸಿಲಿನ ತಾಪದೊಂದಿಗೆ ಜ್ಯೂಸ್ ಬೆಲೆಯೂ ಏರಿಕೆ

**ಬೆಂಗಳೂರು:** ನಗರದಲ್ಲಿ ತಾಪಮಾನ ಪ್ರಮಾಣ ಹೆಚ್ಚಾಗುತ್ತಿದ್ದು, ನಗರವಾಸಿಗಳು ತಡೆಯಲಾರದ ಸೆಖೆ, ಬಿಸಿಲಿನ ಬೇಗೆಗೆ ಹೈರಾಣಾಗುತ್ತಿದ್ದಾರೆ.

ಬಿಸಿಲಿನ ಪ್ರಮಾಣ ಹೆಚ್ಚಾಗುತ್ತಿದ್ದಂತೆ ಸಾರ್ವಜನಿಕರು ಸೆಖೆ ತಡೆಯಲಾಗದೇ ತಂಪು ಪಾನೀಯಗಳು ಹಾಗೂ ಎಳನೀರಿನ ಕಡೆ ಮುಖ ಮಾಡಿದ್ದು, ಬೆಳಗ್ಗೆಯಿಂದ ಸಂಜೆಯವರೆಗೂ ಜ್ಯೂಸ್ ಅಂಗಡಿಗಳು ಹಾಗೂ ಎಳನೀರಿನ ಮುಂದೆ ಗ್ರಾಹಕರ ಸರದಿ ಕಂಡುಬರುತ್ತಿದೆ. ಬೇಡಿಕೆ ಹೆಚ್ಚಾಗುತ್ತಿದ್ದಂತೆಯೆ ಹಣ್ಣಿನ ಜ್ಯೂಸ್ ಹಾಗೂ ಎಳನೀರಿನ ಬೆಲೆ ಗಗನಕ್ಕೇರಿಕೆಯಾಗಿದೆ. ಕಳೆದ ಮೂರು ನಾಲ್ಕು ತಿಂಗಳಿಗೆ ಹೋಲಿಸಿದರೆ ಎಳನೀರು ಹಾಗೂ ಜ್ಯೂಸ್ ಬೆಲೆ ಗಮನರ್ಹಾವಾಗಿ ಜಾಸ್ತಿಯಾಗಿದೆ.

ಮಳೆಯ ಕೊರತೆಯಿಂದಾಗಿ ಇಳುವರಿ ಕುಂಠಿತವಾಗಿದ್ದು, ಹಣ್ಣು, ತರಕಾರಿಗಳ ಬೆಲೆ ಗಗನಕ್ಕೇರಿದೆ. ಬಿಸಿಲಿನ ಹೆಚ್ಚಳದ ಹಿನ್ನೆಲೆ ದಿನದಿಂದ ದಿನಕ್ಕೆ ಜ್ಯೂಸ್‌ಗೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವುದರಿಂದ ಬೆಲೆ ಹೆಚ್ಚಾಗಿದೆ. ಕಳೆದ ತಿಂಗಳುಗಳಿಗೆ ಹೋಲಿಸಿದರೆ ಜ್ಯೂಸ್‌ಗಳ ಬೆಲೆಯಲ್ಲಿ 20–30 ರು ಏರಿಕೆಯಾಗಿದ್ದು, ಪ್ರತಿದಿನ ಅಂಗಡಿಗಳಲ್ಲಿ 600–700 ಗ್ಲಾಸ್‌ನಷ್ಟು ಜ್ಯೂಸ್ ಮಾರಾಟವಾಗುತ್ತಿದೆ. ನಗರದ ಹಲವು ಕಡೆಗಳಲ್ಲಿ ಎಳನೀರು 60–70 ರು ಗೆ ಮಾರಾಟವಾಗುತ್ತಿದೆ. ಬೆಲೆ ಏರಿಕೆಯಾಗುತ್ತಿದ್ದರೂ ಗ್ರಾಹಕರ ಸಂಖ್ಯೆ ಮಾತ್ರ ಕಡಿಮೆಯಾಗುತ್ತಿಲ್ಲ.



ಎಷ್ಟಿದೆ ಹಣ್ಣಿನ ಜ್ಯೂಸ್ ಬೆಲೆ?

| ಜ್ಯೂಸ್ | | ಹಿಂದಿನ ದರ | ಇಂದಿನ ದರ |
|---|---|---|---|
| ಆ್ಯಪಲ್ ಜ್ಯೂಸ್ | | 60 | 70 ರು. |
| ದಾಳಿಂಬೆ ಜ್ಯೂಸ್ | | 60 | 70 ರು. |
| ಮುಸಂಬಿ ಜ್ಯೂಸ್ | 40 | 50 ರು. | |
| ಆರೆಂಜ್ ಜ್ಯೂಸ್ | | 40 | 55 ರು. |
| ಬನಾನ ಮಿಲ್ಕ್ ಶೇಕ್ | 50 | 60 ರು. | |
| ಕ್ಯಾರೆಟ್ ಜ್ಯೂಸ್ | | 60 | 70 ರು. |
| ವಾಟರ್‌ಮೆಲನ್ ಜ್ಯೂಸ್ | | 40 | 50 ರು. |
| ಪೈನಾಪಲ್ ಜ್ಯೂಸ್ | 45 | 55 ರು. | |
| ಮಸ್ಕ್ ಮೆಲನ್ ಜ್ಯೂಸ್ | 45 | 50 ರು. | |
| ಮಿಕ್ಸ್ ಜ್ಯೂಸ್ | 40 | 50 ರು. | |
| ಡ್ರೈಫ್ರೂಟ್ಸ್ ಶೇಕ್ | | 75 | 85 ರು. |
| ಸಪೋಟ ಜ್ಯೂಸ್ | | 45 | 55 ರು. |
| ಪಪಾಯ ಜ್ಯೂಸ್ | 50 | 60 ರು. | |
| ಗ್ರೇಪ್ಸ್ ಜ್ಯೂಸ್ | | 50 | 60 ರು. |
| ಪಲ್ಲಿ ಗ್ರೇಪ್ಸ್ ಜ್ಯೂಸ್ | 40 | 50 ರು. | |
| ಕಬ್ಬಿನ ಹಾಲು | 35 | 45 ರು. | |
| ಟೆಂಡರ್ ಕೊಕನಟ್ ಮಿಲ್ಕ್ ಶೇಕ್ | | 60 | 80 ರು. |

## 38,238 ಕೋಟಿ ರು.ವಹಿವಾಟು

**ಬೆಂಗಳೂರು:** ಜೀವ ವಿಮಾ ಕಂಪನಿ ಎಸ್‌ಬಿಐ ಲೈಫ್ ಇನ್ಸೂರೆನ್ಸ್ 2024ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ 38,238 ಕೋಟಿ ರು. ಮೊತ್ತದ ಹೊಸ ವಹಿವಾಟಿನ ಪ್ರೀಮಿಯಂ ದಾಖಲಿಸಿದೆ.

ಹಣಕಾಸು ವರ್ಷದಲ್ಲಿನ ಹೊಸ ವಹಿವಾಟಿನ ಪ್ರೀಮಿಯಂ 29,589 ಕೋಟಿಗಳಷ್ಟಿತ್ತು. ಸಿಂಗಲ್ ಪ್ರೀಮಿಯಂ ಹಿಂದಿನ ವರ್ಷಕ್ಕಿಂತ ಶೇ.44ರಷ್ಟು ಹೆಚ್ಚಾಗಿದೆ. ಹೊಸ ವಹಿವಾಟು ಪ್ರೀಮಿಯಂ 2024ರ ಮಾರ್ಚ್ 31ಕ್ಕೆ ಕೊನೆಗೊಂಡ ಹಣಕಾಸು ವರ್ಷದಲ್ಲಿ 4,165 ಕೋಟಿ ರು. ಗಳಷ್ಟಾಗಿ ಶೇ.15ರಷ್ಟು ಬೆಳವಣಿಗೆ ದಾಖಲಿಸಿದೆ. ರಕ್ಷಣೆಯ ವೈಯಕ್ತಿಕ ಹೊಸ ವಹಿವಾಟಿನ ಪ್ರೀಮಿಯಂ 2024 ರ ಮಾರ್ಚ್ 31ಕ್ಕೆ ಕೊನೆಗೊಂಡ ವರ್ಷದಲ್ಲಿ 951 ಕೋಟಿ ರು. ಗಳಷ್ಟಾಗಿದೆ. ವೈಯಕ್ತಿಕ ಹೊಸ ವಹಿವಾಟು ಪ್ರೀಮಿಯಂ 23,832 ಕೋಟಿಗಳಷ್ಟಾ ಗಿದ್ದು, ಹಿಂದಿನ ವರ್ಷಕ್ಕಿಂತ ಶೇ 14ರಷ್ಟು ವೃದ್ಧಿ ಕಂಡಿದೆ. ಹಣಕಾಸು ಹೊಣೆಗಾರಿಕೆ ನಿಭಾಯಿಸುವ ಕಂಪನಿಯ ಸಾಮರ್ಥ್ಯದ ಅನುಪಾತವು 2024ರ ಮಾರ್ಚ್ 31ಕ್ಕೆ 1.96 ಸದೃಢ ಮಟ್ಟದಲ್ಲಿ ಮುಂದುವರಿದಿದೆ. ಇದು ನಿಯಂತ್ರಣ ಕ್ರಮಗಳ ಅಗತ್ಯವಾಗಿರುವ 1.50ಕ್ಕಿಂತ ಹೆಚ್ಚು ದಾಖಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

## ಬೆಂಗಳೂರಲ್ಲಿ ಏರ್‌ಕೂಲರ್, ಎಸಿಗಳ ಖರೀದಿ ಜೋರು

**ಬೆಂಗಳೂರು:** ನಗರದ ಜನರು ಬಿಸಿಲಿನ ತಾಪದಿಂದಾಗಿ ಮನೆಯಿಂದ ಹೊರಬರಲು ಯೋಚಿಸುವಂತಹ ಸ್ಥಿತಿ ನಿರ್ಮಾಣವಾಗಿದೆ. ಇದರೊಂದಿಗೆ ಬಿಸಿಲಿನ ಜತೆಗೆ ಬಿಸಿಗಾಳಿಯೂ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವುದರಿಂದ ಮನೆಯಲ್ಲೂ ಇರಲಾಗದೇ ಹೊರಗೂ ಹೋಗಲಾರದೇ ಒದ್ದಾಡುವ ಸ್ಥಿತಿ ನಿರ್ಮಾಣವಾಗಿದೆ.



ಈ ಹಿನ್ನೆಲೆ ಸೆಖೆಯಿಂದ ಮುಕ್ತಿ ಪಡೆಯುವ ಸಲುವಾಗಿ ಜನರು ನಾನಾ ಕ್ರಮಗಳನ್ನು ಕೈಗೊಳ್ಳುತ್ತಿದ್ದು, ಜನರು ಏರ್ ಕೂಲರ್, ಎಸಿ ಅಂಗಡಿಗಳತ್ತ ಮುಖ ಮಾಡಿದ್ದಾರೆ. ಸೀಲಿಂಗ್ ಫ್ಯಾನ್, ಟೇಬಲ್ ಫ್ಯಾನ್‌ಗಳು 24 ಗಂಟೆಗಳ ಓಡಿದರೂ, ಸೆಖೆಯಿಂದ ಮುಕ್ತಿ ದೊರೆಯದೆ, ಫ್ಯಾನ್‌ಗಳು ತಿರುಗಿ ತಿರುಗಿ ಬಿಸಿ ಗಾಳಿಯನ್ನು ಹೊರಸೂಸುತ್ತಿವೆ. ಇದರಿಂದ ಮುಕ್ತಿಪಡೆಯಲು ಜನರು ಎಸಿ, ಏರ್‌ಕೂಲರ್‌ಗಳ ಖರೀದಿಯತ್ತ ಮುಖ ಮಾಡಿದ್ದಾರೆ.

ಮಾರುಕಟ್ಟೆಗಳಲ್ಲಿ ನಾನಾ ಕಂಪನಿಯ ಹಲವಾರು ಎಸಿ, ಏರ್‌ಕೂಲರ್ ದೊರೆಯುತ್ತಿದ್ದು, ಕಳೆದ ಒಂದು ತಿಂಗಳಿನಿಂದ ಮಾರಾಟ ಜೋರಾಗಿಯೇ ನಡೆಯುತ್ತಿದೆ. ಮಾರುಕಟ್ಟೆಗಳಲ್ಲಿ 10, 15, 25,30 ಲೀ. ಸಾಮರ್ಥ್ಯದ ಏರ್‌ಕೂಲರ್‌ಗಳು ಮಾರಾಟವಾಗುತ್ತಿದ್ದು, ಬೆಲೆಯಲ್ಲಿ ತಲಾ ಒಂದರಿಂದ ಎರಡು ಸಾವಿರ ರು. ಏರಿಕೆಯಾಗಿದೆ. ಆನ್‌ಲೈನ್ ಮೂಲಕವೂ ಗ್ರಾಹಕರು ಖರೀದಿಗೆ ಮುಂದಾಗಿದ್ದು, ಭರ್ಜರಿ ವ್ಯಾಪಾರ ನಡೆಯುತ್ತಿದೆ. ಏರ್‌ಕೂಲರ್‌ಗಳಿಗೆ ತಣ್ಣನೆಯ ನೀರು ಹಾಗೂ ಐಸ್ ಕ್ಯೂಬ್‌ಗಳನ್ನು ಹಾಕಿಕೊಂಡರೆ ಸ್ವಲ್ಪ ತಣ್ಣನೆಯ ಗಾಳಿ ಬರುತ್ತದೆ. ನಿದ್ದೆ ಮಾಡಬಹುದು ಎಂದು ಜನರು ಖರೀದಿಗೆ ಮುಂದಾಗಿದ್ದಾರೆ.

ಅಶ್ಲೀಲ ವಿಡಿಯೊ ಎನ್ನಲಾದ ಪ್ರಜ್ವಲ್ ಪೆನ್‌ಡ್ರೈವ್ ಪ್ರಕರಣ

## ತನಿಖೆಗೆ ಸಹಕರಿಸಲು ಸಂತ್ರಸ್ತೆಯರು ಹಿಂದೇಟು

**ಬೆಂಗಳೂರು:** ಮಾಜಿ ಸಚಿವ ಎಚ್.ಡಿ. ರೇವಣ್ಣ ಪುತ್ರ ಪ್ರಜ್ವಲ್ ರೇವಣ್ಣ ಅವರ ಅಶ್ಲೀಲ ವಿಡಿಯೊ ಎನ್ನಲಾದ ಪೆನ್ ಡ್ರೈವ್ ಪ್ರಕರಣಕ್ಕೆ ಸಂಬಂಧಪಟ್ಟಂತೆ ಎಸ್‌ಐಟಿಗೆ ಮಾಹಿತಿ ನೀಡಲು ಸಂತ್ರಸ್ತೆಯರು ಹಿಂದೇಟು ಹಾಕುತ್ತಿದ್ದಾರೆ. ನನಗೆ ತೊಂದರೆ ಕೊಟ್ಟರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಬೆದರಿಕೆ ಒಡ್ಡುತ್ತಿದ್ದಾರೆ ಎಂಬ ಅಂಶ ಬೆಳಕಿಗೆ ಬಂದಿದೆ.

ಎಸ್‌ಐಟಿ ಅಧಿಕಾರಿಗಳು ತನಿಖೆಗಾಗಿ ಅವರನ್ನು ಭೇಟಿ ಮಾಡಿ ಹೇಳಿಕೆ ಪಡೆಯಲು ಹೋದರೆ ಮೊದಲೇ ನೊಂದಿರುವ ನಮ್ಮನ್ನು ಮತ್ತಷ್ಟು ನೋಯಿಸಬೇಡಿ. ಈ ಬಗ್ಗೆ ನಮ್ಮ ಬಳಿ ಏನನ್ನೂ ಕೇಳಬೇಡಿ. ಇದು ನಮ್ಮ ಜೀವನದ ಪ್ರಶ್ನೆಯಾಗಿದೆ. ಅಷ್ಟಕ್ಕೂ ನೀವು ಒತ್ತಾಯ ಮಾಡಿದರೆ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂಬ ಎಚ್ಚರಿಕೆಯನ್ನು ನೀಡಿದ್ದಾರೆ ಎಂದು ತಿಳಿದುಬಂದಿದೆ.

ನಾವೇನು ದೂರು ಕೊಟ್ಟಿಲ್ಲ, ನಮ್ಮನ್ನು ಯಾಕೆ ಎಳೆದು ತರುತ್ತೀರಿ? ನಮ್ಮನ್ನು ನಮ್ಮ ಪಾಡಿಗೆ ಬಿಟ್ಟುಬಿಡಿ ಎಂದು ಹೇಳುತ್ತಿರುವುದರಿಂದ ಎಸ್‌ಐಟಿ ತನಿಖೆಗೆ ಸ್ವಲ್ಪ ಹಿನ್ನಡೆಯಾಗಿದೆ. ಹೀಗಾಗಿ ಸದ್ಯಕ್ಕೆ ದೂರುದಾರೆ ಸಂತ್ರಸ್ತೆಯ ಮಾಹಿತಿ ಆಧರಿಸಿ ತನಿಖೆಯನ್ನು ಮುನ್ನಡೆಸಲು ತೀರ್ಮಾನಿಸಲಾಗಿದೆ.

### ತನಿಖೆಗೆ ಮಹಿಳಾ ಅಧಿಕಾರಿಗಳ ನೇಮಕ

ಅಂತೆಯೇ ಸಂತ್ರಸ್ತರ ಮೊಬೈಲ್‌ಗೆ ನೋಟಿಸ್ ಕಳುಹಿಸಿ ವಿಚಾರಣೆ ಮಾಡಲು ನಿರ್ಧರಿಸಿದ್ದಾರೆ. ಏಕೆಂದರೆ ವಿಚಾರ ಹೊರಬಂದರೆ ಕುಟುಂಬದಲ್ಲಿ ಬಿರುಕು ಉಂಟಾಗಬಹುದು. ಇದರಿಂದ ಮೋಸ ಹೋಗಿರುವ ಮಹಿಳೆಯರ ವಿಚಾರಣೆಯನ್ನು ಗೌಪ್ಯವಾಗಿಡಲು ಎಸ್‌ಐಟಿ ಅಧಿಕಾರಿಗಳು ತೀರ್ಮಾನ ಮಾಡಿದ್ದಾರೆ. ಇದನ್ನು ಮನದಲ್ಲಿಟ್ಟುಕೊಂಡೇ ಮಹಿಳಾ ಅಧಿಕಾರಿಗಳನ್ನು ಸರಕಾರ ನೇಮಕ ಮಾಡಿದೆ. ಈಗಾಗಲೇ ವಿಡಿಯೋದಲ್ಲಿರುವ ಮಹಿಳೆಯರ ಲಿಸ್ಟ್ ಮಾಡಿಕೊಂಡಿದೆ. ಹಲವು ಮಹಿಳೆಯರು ಮುಜುಗರದಿಂದ ಹೊರ ಬಾರದ ಕಾರಣ ಅವರ ಫೋನ್ ನಂಬರ್ ಪಡೆದು ಮೊಬೈಲ್‌ಗೆ ನೋಟಿಸ್ ನೀಡಲು ಸಿದ್ಧತೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.



ಪ್ರಕರಣದ ತನಿಖೆ ನಡೆಸುತ್ತಿರುವ ಎಸ್‌ಐಟಿ ಘಟಕವು, ಸಂತ್ರಸ್ತರನ್ನು ಗೌಪ್ಯವಾಗಿ ವಿಚಾರಣೆ ನಡೆಸಲು ಮುಂದಾಗಿದೆ. ವರದಿಗಳ ಪ್ರಕಾರ, ಸರಕಾರಿ ನೌಕರರು, ಪೊಲೀಸರು ಇನ್ನುಳಿದಂತೆ ಅನೇಕ ಮಹಿಳೆಯರಿಗೆ ಮೋಸವಾಗಿದೆ ಎಂಬ ಆರೋಪವಿದೆ. ಸಂತ್ರಸ್ತ ಮಹಿಳೆಯರನ್ನು ಗೌಪ್ಯ ಸ್ಥಳದಲ್ಲಿ ವಿಚಾರಣೆ ಮಾಡಲು ನಿರ್ಧಾರ ಮಾಡಿದ್ದಾರೆ. ಸಂತ್ರಸ್ತರ ಕುಟುಂಬದವರಿಗೂ ತಿಳಿಯದಂತೆ ವಿಚಾರಣೆಗೆ ಬರಲು ನಿರ್ಧಾರ ಮಾಡಿದ್ದಾರೆ.

### ಸಂತ್ರಸ್ತೆಯರ ಸಂಪರ್ಕಿಸಲು ಎಸ್‌ಐಟಿ ಪ್ರಯತ್ನ

ಎಷ್ಟೇ ಪ್ರಯತ್ನಪಟ್ಟರೂ ಸಂತ್ರಸ್ತೆಯರು ಮಾತ್ರ ಎಸ್‌ಐಟಿಗೆ ಸ್ಪಂದಿಸುತ್ತಿಲ್ಲ. ನಾವು ಏನೂ ಹೇಳಲ್ಲ, ಏನನ್ನೂ ಕೇಳಬೇಡಿ ಎಂದು ಸಂತ್ರಸ್ತೆಯರು ಹೇಳುತ್ತಿದ್ದಾರೆ. ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ವಿಡಿಯೊದಲ್ಲಿರುವ ಮಹಿಳೆಯರನ್ನು ಸಂಪರ್ಕಿಸಲು ಎಸ್‌ಐಟಿ ತಂಡವು ಸಾಕಷ್ಟು ಪ್ರಯತ್ನಪಟ್ಟಿದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಕ್ಕೆ ಕಾಂಗ್ರೆಸ್ ಕೊಡುಗೆ ಏನು | ರೈತರ ಜೇಬಿಗೆ ಕತ್ತರಿಹಾಕಿ, ಮಹಿಳೆಯರಿಗೆ ಹಣ ಕೊಡುತ್ತಿದ್ದಾರೆ: ಅಶೋಕ್

# ಖಜಾನೆ ಖಾಲಿ, ಪ್ರೋತ್ಸಾಹ ಧನಕ್ಕೂ ಸರಕಾರದಿಂದ ಕತ್ತರಿ

**ಬೆಂಗಳೂರು:** ಕರ್ನಾಟಕದಲ್ಲಿ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ವರ್ಷ ಕಳೆಯುವುದರಲ್ಲಿ ಹಲವು ಕರದ ಭಾರವನ್ನು ರಾಜ್ಯದ ಜನರ ಮೇಲೆ ಹೇರಿದ್ದಾರೆ. ಸರಕಾರ ಖಜಾನೆಯಾಗಿರುವುದಕ್ಕೆ ಜನರ ಮೇಲೆ ಹೊರ ಹಾಕುತ್ತಿದ್ದಾರೆ ಎಂದು ಪ್ರತಿಪಕ್ಷ ನಾಯಕ ಆರ್. ಅಶೋಕ್ ಟೀಕಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎಂಟು ತಿಂಗಳಿಂದ ರೈತರಿಗೆ ಸರಕಾರ ಹಾಲಿನ ಪ್ರೋತ್ಸಾಹಧನ ನೀಡಿಲ್ಲ. ಖಜಾನೆ ಖಾಲಿಯಾಗಿರುವುದಕ್ಕೆ ಇದೇ ಸಾಕ್ಷಿ. ಎಂಟು ತಿಂಗಳಿಂದ ಹಾಲಿಗೆ ನೀಡುವ ಐದು ರು. ಪ್ರೋತ್ಸಾಹಧನ ನೀಡಿಲ್ಲ. ಸುಮಾರು 700 ಕೋಟಿ ರು. ಬಾಕಿ ಉಳಿಸಿಕೊಂಡಿದ್ದಾರೆ. ಜನರಿಗೆ ತೆರಿಗೆ ಹಾಕಿ ಅವರಿಂದ ವಸೂಲಿ ಮಾಡಿ ನಂತರ ಮಹಿಳೆಯರಿಗೆ ಹಣ ನೀಡುತ್ತೇವೆ ಎಂದು ನಾಟಕವಾಡಿದ್ದಾರೆ. ಉಚಿತ ಕೊಡುವ ಬದಲು ವಿದ್ಯಾರ್ಥಿಗಳಿಗೆ ಉಚಿತ ಪಾಸ್, ಶಾಲೆ, ಆಸ್ಪತ್ರೆ ನಿರ್ಮಾಣ ಮೊದಲಾದ ಯೋಜನೆಗಳನ್ನು ನೀಡಬೇಕಿತ್ತು ಎಂದು ಅಭಿಪ್ರಾಯಪಟ್ಟರು.

> ಅಂಬೇಡ್ಕರ್ ರಚಿತ ಸಂವಿಧಾನದಲ್ಲಿ ಧರ್ಮಾಧಾರಿತ ಮೀಸಲು ಇಲ್ಲ. ಕಾಂಗ್ರೆಸ್‌ಗೆ ಮೊದಲೇ ಅಂಬೇಡ್ಕರ್ ಬಗ್ಗೆ ಗೌರವವಿಲ್ಲ. ಆದ್ದರಿಂದ ಸಂವಿಧಾನವನ್ನೇ ತಿರುಚಿ ಹಿಂದುಳಿದ ವರ್ಗಗಳಿಗೆ ಅನ್ಯಾಯ ಮಾಡಿದ್ದಾರೆ. ಪಿತೃಗಳಿಗೆ ತಿಥಿಯಲ್ಲಿ ವಡೆ ಇಡುತ್ತಾರೆ. ಅಂತಹ ಹೆಸರಿನ ಸ್ಯಾಮ್ ಪಿತ್ರೋಡಾ ಅವರು, ಜನರ ಪಿತ್ರಾರ್ಜಿತ ಆಸ್ತಿಗಳಿಗೆ ತರ್ಪಣ ಬಿಡಲು ಸಲಹೆ ನೀಡಿದ್ದಾರೆ.
>
> – ಆರ್. ಅಶೋಕ್, ಪ್ರತಿಪಕ್ಷ ನಾಯಕ

ಖಜಾನೆ ಖಾಲಿ ಮಾಡಿಕೊಂಡ ಬಳಿಕ ಕೇಂದ್ರ ಸರಕಾರದಿಂದ ಅನ್ಯಾಯವೆಂದು ಹೇಳುತ್ತಿದ್ದಾರೆ. ಕಳೆದ 50 ವರ್ಷದಲ್ಲಿ ಕಾಂಗ್ರೆಸ್ ಸರಕಾರದಿಂದ ರಾಜ್ಯಕ್ಕೆ ಎಷ್ಟು ಹಣ ಬಂದಿದೆ? ಕಾಂಗ್ರೆಸ್‌ನವರ ಯೋಗ್ಯತೆಗೆ ಕರ್ನಾಟಕಕ್ಕೆ ಒಂದು ಕೋಟಿ ಕೂಡ ಬರ ಪರಿಹಾರ ಈ ಹಿಂದೆ ನೀಡಿರಲಿಲ್ಲ ಎಂದು ಟೀಕಿಸಿದರು.

ಯುಪಿಎ ಸಾಧನೆಯ ಜಾಹೀರಾತು ನೀಡಿ

ರಾಹುಲ್ ಗಾಂಧಿ ಎಲ್ಲೇ ಹೋದರೂ ಪಂಗನಾಮ ಸಿಗುತ್ತಿದೆ. ಅವರ ನಾಯಕತ್ವದ ಮೇಲೆ ವಿಶ್ವಾಸ ಇಲ್ಲವೆಂದೇ ಸಿಎಂ ಸಿದ್ದರಾಮಯ್ಯ ಕೇವಲ ಗ್ಯಾರಂಟಿ ಬಗ್ಗೆ ಮಾತನಾಡುತ್ತಿದ್ದಾರೆ. ಇವರಿಗೆ ನೈತಿಕತೆಯಿದ್ದರೆ ಯುಪಿಎ ಸರಕಾರ ಏನು ಮಾಡಿದೆ ಎಂದು ಜಾಹೀರಾತು ನೀಡಬೇಕಿತ್ತು. ಇದೇ ಕಾಂಗ್ರೆಸ್ ದೇಶಕ್ಕೆ ಚೊಂಬು ನೀಡಿತ್ತು. ನಂತರ ಬಂದ ಪ್ರಧಾನಿ ನರೇಂದ್ರ ಮೋದಿ ಶೌಚಾಲಯಗಳನ್ನು ಕಟ್ಟಿಸಿ ಚೊಂಬು ಬಳಸದಂತೆ ಮಾಡಿದರು ಎಂದರು.

ಎಚ್‌ಎಎಲ್ ಮುಚ್ಚುತ್ತಾರೆ ಎಂದು ಕಾಂಗ್ರೆಸ್ ಆರೋಪ ಮಾಡಿತ್ತು. ಅದೇ ಎಚ್‌ಎಎಲ್ ಈಗ 84 ಸಾವಿರ ಕೋಟಿ ವಹಿವಾಟು ನಡೆಸುತ್ತಿದೆ. ಇಂದು ಎಲ್ಲ ಸಾರ್ವಜನಿಕ ಉದ್ದಿಮೆಗಳು ಲಾಭ ಮಾಡುತ್ತಿವೆ. 2022ರ ವೇಳೆಗೆ ಆರು ಕೋಟಿ ಹೊಸ ಎಂಎಸ್‌ಎಂಇ ಉದ್ಯಮಗಳು ಸೃಷ್ಟಿಯಾಗಿವೆ. ರೋಜ್‌ಗಾರ್ ಯೋಜನೆಯಲ್ಲಿ 7.5 ಲಕ್ಷ ಜನರಿಗೆ ಉದ್ಯೋಗ ಸಿಕ್ಕಿದೆ. ಸಿಎಂ ಸಿದ್ದರಾಮಯ್ಯ ಎಷ್ಟು ಉದ್ಯೋಗ ಸೃಷ್ಟಿಸಿದ್ದಾರೆ ಎಂದು ಹೇಳಲಿ ಎಂದು ಸವಾಲೆಸೆದರು.

### ಪ್ರಜ್ವಲ್ ನಿಮ್ಮ ಸಂಸದ

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮಾತಿಗೆ ಮೂರು ಕಾಸಿನ ಬೆಲೆ ಇಲ್ಲ. ಭಯೋತ್ಪಾದನಾ ಚಟುವಟಿಕೆಗೆ ಅವರು ಹೇಳಿದ ಮಾತೆಲ್ಲ ಸುಳ್ಳಾಯಿತು. ಅವರು ಗೃಹಸಚಿವ ಅಮಿತ್ ಶಾ ಬಗ್ಗೆ ಹೇಳಿದ ಮಾತಿಗೆ ಬೆಲೆ ಕೊಡಬೇಕಾಗಿಲ್ಲ. 28 ಸ್ಥಾನದಲ್ಲಿ ಕೆಲವು ಸ್ಥಾನಗಳನ್ನು ಜೆಡಿಸ್‌ಗೆ ಬಿಟ್ಟಿದ್ದು, ಅಲ್ಲಿ ಯಾರು ಸ್ಪರ್ಧಿಸಬೇಕೆಂದು ಜೆಡಿಎಸ್ ತೀರ್ಮಾನಿಸುತ್ತದೆ. ಪ್ರಜ್ವಲ್ ರೇವಣ್ಣ ನಮ್ಮ ಸಂಸದರಲ್ಲ. ಇವರೇ ಜೋಡೆತ್ತು ಎಂದು ಅವರ ಜೊತೆಗೆ ಇದ್ದು ಮೊದಲಿಗೆ ಗೆಲ್ಲಿಸಿದ್ದರು. ಇದಕ್ಕೆ ಕಾಂಗ್ರೆಸ್ಸೇ ಉತ್ತರ ನೀಡಬೇಕು. ಪ್ರಜ್ವಲ್ ವಿದೇಶಕ್ಕೆ ಹೋಗುವಾಗ ಕರ್ನಾಟಕ ಪೊಲೀಸರು ಏನು ಮಾಡುತ್ತಿದ್ದರು? ಜಿಲ್ಲಾಧಿಕಾರಿ ಏನು ಮಾಡುತ್ತಿದ್ದರು? ಕಾಂಗ್ರೆಸ್ ಸರಕಾರ ಗುಪ್ತಚರ ದಳ ವಿಫಲವಾಗಿದೆ ಎಂದು ಒಪ್ಪಿಕೊಳ್ಳಲಿ ಎಂದರು.

## ಸಾಕ್ಷ್ಯವಿಲ್ಲದೇ ಯಾರ ಬಂಧನವೂ ಮಾಡಲ್ಲ

**ಬೆಂಗಳೂರು:** ಹಾಸನ ಪೆನ್‌ಡ್ರೈವ್ ಪ್ರಕರಣದಲ್ಲಿ ಹಲವರ ಜೀವನದ ಪ್ರಶ್ನೆಯಿದೆ. ಆದ್ದರಿಂದ ಯಾವುದೇ ಕಾರಣಕ್ಕೂ ಸಾಕ್ಷಿ, ಪುರಾವೆಯಿಲ್ಲದೇ ಯಾರನ್ನೂ ಬಂಧಿಸುವುದಿಲ್ಲ ಎಂದು ಗೃಹ ಸಚಿವ ಡಾ.ಜಿ. ಪರಮೇಶ್ವರ್ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಈ ಪ್ರಕರಣ ಸೂಕ್ಷ್ಮವಾಗಿರುವುದರಿಂದಲೇ ಎಸ್‌ಐಟಿ ತನಿಖೆಗೆ ಆದೇಶಿಸಲಾಗಿದೆ. ಸಾಕ್ಷಿ ಪುರಾವೆಗಳನ್ನು ನೋಡದೆ ಏಕಾಏಕಿ ರೇವಣ್ಣ ಅಥವಾ ಯಾರನ್ನೇ ಆಗಲಿ ಬಂಧಿಸುವುದಿಲ್ಲ. ಕೇಂದ್ರ ಗೃಹಸಚಿವ ಅಮಿತ್ ಶಾ ಅವರು ರಾಜ್ಯ ಸರಕಾರ ಕ್ರಮಕ್ಕೆಗೊಳ್ಳುತ್ತಿಲ್ಲ ಎಂದು ಹೇಳಿದ್ದಾರೆ. ಆ ರೀತಿ ಏಕಾಏಕಿ ಕ್ರಮ ತೆಗೆದುಕೊಳ್ಳುವುದು ಸೂಕ್ತವಲ್ಲ. ಇದೊಂದು ಸೂಕ್ಷ್ಮ ಪ್ರಕರಣವಾಗಿದ್ದು ಸರಕಾರ ಗಂಭೀರವಾಗಿ ಪರಿಗಣಿಸಿದೆ, ಎಚ್ಚರಿಕೆಯಿಂದ ಕ್ರಮಗಳನ್ನು ಕೈಗೊಳ್ಳುತ್ತಿದೆ ಎಂದರು.

ದೂರುದಾರರಿಂದ ಹೇಳಿಕೆ ಪಡೆದಿದ್ದು, ಕಾನೂನಾತ್ಮಕವಾಗಿ ನೋಟಿಸ್ ಜಾರಿಗೊಳಿಸಲಾಗಿದೆ. 24 ಗಂಟೆಯೊಳಗಾಗಿ ವಿಚಾರಣೆಗೆ ಹಾಜರಾಗಬೇಕು, ಇಲ್ಲದಿದ್ದರೆ ಕಾನೂನಿನ ಪ್ರಕಾರ ಮುಂದಿನ ಕ್ರಮಗಳನ್ನು ಎಸ್‌ಐಟಿ ಅಧಿಕಾರಿಗಳು ತೆಗೆದುಕೊಳ್ಳುತ್ತಾರೆ ಎಂದು ತಿಳಿಸಿದರು.

> ಲೋಕಸಭಾ ಚುನಾವಣೆ ಬಳಿಕ ರಾಜ್ಯ ಸರಕಾರ ಪಂಚಖಾತ್ರಿ ಯೋಜನೆಗಳನ್ನು ಸ್ಥಗಿತಗೊಳಿಸುತ್ತದೆ, ಕಾಂಗ್ರೆಸ್ ಸೋತರೆ ಗೃಹಜ್ಯೋತಿ ಯೋಜನೆ ನಿಲ್ಲಸಲಾಗುತ್ತದೆ ಎಂಬೆಲ್ಲಾ ಅಪಪ್ರಚಾರಗಳನ್ನು ಪ್ರತಿಪಕ್ಷಗಳು ಮಾಡುತ್ತಿವೆ. ಮುಖ್ಯಮಂತ್ರಿಯಾದಿಯಾಗಿ ಸಂಪುಟದ ಎಲ್ಲಾ ಸಚಿವರು ಸ್ಪಷ್ಟವಾಗಿ ಹೇಳಿದ್ದೇವೆ. ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ. ಈಗಾಗಲೇ ಪಂಚಖಾತ್ರಿಗಳಿಗೆ ಬಜೆಟ್ನಲ್ಲಿ ಸಾಕಷ್ಟು ಹಣ ಮೀಸಲಿಡಲಾಗಿದೆ.
>
> –ಡಾ.ಜಿ. ಪರಮೇಶ್ವರ್, ಗೃಹ ಸಚಿವ

**ವಿದೇಶಕ್ಕೆ ಹೋಗಿರುವುದು ಸ್ಪಷ್ಟ:** ಪ್ರಕರಣದ ಕೇಂದ್ರ ಬಿಂದು ಪ್ರಜ್ವಲ್ ವಿದೇಶಕ್ಕೆ ಹೋಗಿರುವುದು ವಿಮಾನದ ಟಿಕೆಟ್‌ಗಳಿಂದ ಪತ್ತೆಯಾಗಿದೆ. ಅವರನ್ನು ವಾಪಸ್ ಕರೆತರಲು ಅಗತ್ಯವಿರುವ ಎಲ್ಲಾ ಪ್ರಕ್ರಿಯೆಗಳನ್ನು ಎಸ್‌ಐಟಿ ಕೈಗೊಳ್ಳಲಿದೆ. ಅಗತ್ಯವಾದರೆ ಕೇಂದ್ರ ಸರಕಾರದ ಸಹಾಯ ಪಡೆಯಲಿದೆ ಎಂದರು.